**ಇಸ್ರೇಲಿ ಸಂಸತ್ ನೆಸ್ಸೆಟ್ ಉದ್ದೇಶಿಸಿ ಪ್ರಧಾನಮಂತ್ರಿ ಭಾಷಣ (ಫೆಬ್ರವರಿ 25, 2026)**

ಫೆಬ್ರವರಿ 25, 2026

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಇಂದು ಜೆರುಸಲೇಂನ ನೆಸ್ಸೆಟ್‌ನ ವಿಶೇಷ ಸಭೆಯನ್ನುದ್ದೇಶಿಸಿ ಮಾತನಾಡಿದರು. ಇಸ್ರೇಲಿ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ ಮೊದಲ ಭಾರತೀಯ ಪ್ರಧಾನಿ ಅವರಾಗಿದ್ದಾರೆ.

2. ಪ್ರಧಾನಮಂತ್ರಿ ನೆಸ್ಸೆಟ್‌ಗೆ ಆಗಮಿಸುತ್ತಿದ್ದಂತೆ, ನೆಸ್ಸೆಟ್‌ನ ಸ್ಪೀಕರ್ ಗೌರವಾನ್ವಿತ ಅಮೀರ್ ಒಹಾನಾ ಅವರನ್ನು ಬರ ಮಾಡಿಕೊಂಡರು ಮತ್ತು ವಿಧ್ಯುಕ್ತ ಸ್ವಾಗತ ನೀಡಿದರು. ಪ್ರಧಾನಮಂತ್ರಿಯವರ ಭಾಷಣಕ್ಕೆ ಮುಂಚಿತವಾಗಿ ಇಸ್ರೇಲ್‌ನ ಪ್ರಧಾನಮಂತ್ರಿ, ಗೌರವಾನ್ವಿತ ಶ್ರೀ ಬೆಂಜಮಿನ್ ನೆತಾನ್ಯಾಹು; ವಿರೋಧ ಪಕ್ಷದ ನಾಯಕ, ಗೌರವಾನ್ವಿತ ಶ್ರೀ ಯೈರ್ ಲ್ಯಾಪಿಡ್; ಮತ್ತು ಸ್ಪೀಕರ್ ಒಹಾನಾ ಮಾತನಾಡಿದರು, ಮತ್ತು ಎಲ್ಲರೂ ಭಾರತ-ಇಸ್ರೇಲ್ ಸಂಬಂಧಗಳಿಗೆ ಬಲವಾದ ದ್ವಿಪಕ್ಷೀಯ ಬೆಂಬಲವನ್ನು ವ್ಯಕ್ತಪಡಿಸಿದರು.

3. ವಿಶೇಷ ಗೌರವಕ್ಕಾಗಿ ಸ್ಪೀಕರ್‌ಗೆ ಧನ್ಯವಾದ ಸಲ್ಲಿಸುವ ಮೂಲಕ ಪ್ರಧಾನಮಂತ್ರಿ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಭಾರತ ಮತ್ತು ಇಸ್ರೇಲ್ ನಡುವಿನ ಸ್ನೇಹದ ಬಲವಾದ ಬಂಧಗಳನ್ನು ಎತ್ತಿ ತೋರಿಸಿದ ಪ್ರಧಾನಮಂತ್ರಿ, ಎರಡೂ ರಾಷ್ಟ್ರಗಳು ಪ್ರಾಚೀನ ನಾಗರಿಕತೆಯ ಸಂಬಂಧಗಳನ್ನು ಮತ್ತು ತಂತ್ರಜ್ಞಾನ, ನಾವೀನ್ಯತೆ, ರಕ್ಷಣೆ, ಭದ್ರತೆ ಮತ್ತು ಕಾರ್ಯತಂತ್ರದ ಒಮ್ಮುಖಗಳ ಆಧಾರದ ಮೇಲೆ ಬಲವಾದ ಸಮಕಾಲೀನ ಪಾಲುದಾರಿಕೆಯನ್ನು ಹಂಚಿಕೊಂಡಿವೆ ಎಂದು ಹೇಳಿದರು. ಕೃಷಿ, ಗ್ರಾಮೀಣಾಭಿವೃದ್ಧಿ, ನೀರಿನ ನಿರ್ವಹಣೆ, ಸುಸ್ಥಿರತೆ ಮತ್ತು ಉದ್ಯಮದಲ್ಲಿ ಸಹಕಾರದ ಆಧಾರದಲ್ಲಿ ಜನರ ನಡುವಿರುವ ಉತ್ತಮ ಬಾಂಧವ್ಯ ಈ ಸಂಬಂಧಕ್ಕೆ  ಕ್ರಿಯಾತ್ಮಕ ದೃಷ್ಟಿಕೋನವನ್ನು ನೀಡಿದೆ ಎಂದು ಅವರು ಹೇಳಿದರು. ಎರಡೂ ದೇಶಗಳ ನಡುವಿನ ಐತಿಹಾಸಿಕ ಸಂಪರ್ಕಗಳು ಮತ್ತು ಜನರ ದ್ವಿಮುಖ ಚಲನೆಯನ್ನು ಒತ್ತಿ ಹೇಳಿದ ಪ್ರಧಾನಿ, ಇಸ್ರೇಲ್‌ನಲ್ಲಿರುವ ಭಾರತೀಯ ಸಮುದಾಯ ಮತ್ತು ಭಾರತದಲ್ಲಿನ ಯಹೂದಿ ವಲಸಿಗರು ಎರಡೂ ದೇಶಗಳ ಪ್ರಗತಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

4. ಭಯೋತ್ಪಾದನೆಗೆ ಶೂನ್ಯ ಸಹಿಷ್ಣುತೆಯ ಎರಡೂ ದೇಶಗಳ ರಾಜಿಯಾಗದ ನೀತಿಯನ್ನು ನೆನಪಿಸಿಕೊಂಡ ಪ್ರಧಾನಿ, ಅಕ್ಟೋಬರ್ 7 ರ ಭಯೋತ್ಪಾದಕ ದಾಳಿಗೆ ಸಂತಾಪ ಸೂಚಿಸಿದರು ಮತ್ತು ಅಂತಹ ಕ್ರೂರತೆಗೆ ಯಾವುದೇ ಸಮರ್ಥನೆ ಇಲ್ಲ ಎಂದು ಹೇಳಿದರು. ಈ ಪ್ರದೇಶದಲ್ಲಿ ಶಾಶ್ವತ ಶಾಂತಿ ಮತ್ತು ಸ್ಥಿರತೆಗೆ ಕೊಡುಗೆ ನೀಡುವ ಎಲ್ಲಾ ಪ್ರಯತ್ನಗಳಿಗೆ ಭಾರತದ ಬೆಂಬಲವನ್ನು ಅವರು ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಅನುಮೋದಿಸಿದ ಗಾಜಾ ಶಾಂತಿ ಉಪಕ್ರಮಕ್ಕೆ ಭಾರತದ ದೃಢವಾದ

ಬೆಂಬಲವನ್ನು ಅವರು ಒತ್ತಿ ಹೇಳಿದರು. ಬಹುಪಕ್ಷೀಯ ಕ್ಷೇತ್ರದಲ್ಲಿ ಭಾರತ ಮತ್ತು ಇಸ್ರೇಲ್ ನಡುವೆ ನಡೆಯುತ್ತಿರುವ ಸಹಯೋಗವನ್ನು ಗಮನಿಸಿದ ಅವರು, ಭಾರತ-ಮಧ್ಯ ಪೂರ್ವ-ಯುರೋಪ್ ಆರ್ಥಿಕ ಕಾರಿಡಾರ್ [IMEC] ಮತ್ತು I2U2 ಚೌಕಟ್ಟುಗಳಲ್ಲಿ ಎರಡು ದೇಶಗಳ ನಡುವೆ ಆಳವಾದ ಸಂವಹನಕ್ಕಾಗಿ ಕರೆ ನೀಡಿದರು.

5. ಭಾರತದ ಬೆಳವಣಿಗೆಯ ಕಥೆಯನ್ನು ಪ್ರಧಾನಮಂತ್ರಿ ಪ್ರಸ್ತಾಪಿಸಿದರು ಹಾಗೂ ಯುವಕರ ನಾವೀನ್ಯತೆ ಮತ್ತು ಸೃಜನಶೀಲತೆಯನ್ನು ಅನಾವರಣಗೊಳಿಸಿ, ವ್ಯಾಪಾರ, ಹೂಡಿಕೆ, ಮೂಲಸೌಕರ್ಯ ಅಭಿವೃದ್ಧಿ, ಹಸಿರು ಬೆಳವಣಿಗೆ, ಸ್ಟಾರ್ಟಪ್‌ಗಳು, ಡಿಜಿಟಲ್ ಪರಿಹಾರಗಳು ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಹೆಚ್ಚಿನ ದ್ವಿಪಕ್ಷೀಯ ಸಹಯೋಗವನ್ನು ಬಯಸಿದರು. ದ್ವಿಪಕ್ಷೀಯ ಹೂಡಿಕೆ ಒಪ್ಪಂದದ ಮುಕ್ತಾಯದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ ಅವರು, ಬಳಕೆಯಾಗದ ವ್ಯಾಪಾರ ಸಾಮರ್ಥ್ಯವನ್ನು ಅರಿತುಕೊಳ್ಳಲು ಮಹತ್ವಾಕಾಂಕ್ಷೆಯ ಮುಕ್ತ ವ್ಯಾಪಾರ ಒಪ್ಪಂದವನ್ನು ಶೀಘ್ರವಾಗಿ ಅಂತಿಮಗೊಳಿಸಲು ಕರೆ ನೀಡಿದರು.

6. ಭಾರತದಲ್ಲಿ ಇತ್ತೀಚೆಗೆ ರಚಿಸಲಾದ ಇಸ್ರೇಲ್‌ಗಾಗಿ ಸಂಸದೀಯ ಸ್ನೇಹ ಗುಂಪಿನ ಪ್ರಯೋಜನವನ್ನು ಪಡೆದು,  ಈ ಎರಡು ಚೈತನ್ಯಮಯ ಪ್ರಜಾಸತ್ತಾತ್ಮಕ ರಾಷ್ಟ್ರಗಳ ನಡುವೆ ಹೆಚ್ಚಿನ ಸಂಸದೀಯ ಸಂಪರ್ಕ ವೃದ್ಧಿಗಾಗಿ ಪ್ರಧಾನಿ ಕರೆ ನೀಡಿದರು. ಎರಡೂ ನಾಗರಿಕತೆಗಳ ಮೌಲ್ಯಗಳ ನಡುವಿನ ಸಾಮ್ಯತೆಯನ್ನು ಉಲ್ಲೇಖಿಸಿದ ಪ್ರಧಾನಮಂತ್ರಿ, 'ವಸುದೈವ ಕುಟುಂಬಕಂ' (ಜಗತ್ತೇ ಒಂದು ಕುಟುಂಬ) ಎಂಬ ಭಾರತದ ತತ್ತ್ವಶಾಸ್ತ್ರ ಮತ್ತು 'ಟಿಕ್ಕುಂ ಓಲಂ' (ಲೋಕವನ್ನು ಸುಧಾರಿಸುವುದು) ಎಂಬ ಇಸ್ರೇಲಿ ತತ್ವವು ಸೌಹಾರ್ದಯುತ ಸಮಾಜದತ್ತ ಇರುವ ಸಾಮಾನ್ಯ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ ಎಂದು ಹೇಳಿದರು. ಭಾರತ-ಇಸ್ರೇಲ್ ಸಂಬಂಧಗಳಿಗೆ ನೀಡಿದ ಕೊಡುಗೆಗಾಗಿ ನೆಸ್ಸೆಟ್‌ನ ಸದಸ್ಯರಿಗೆ ಪ್ರಧಾನಮಂತ್ರಿ ಧನ್ಯವಾದ ಅರ್ಪಿಸಿದರು ಮತ್ತು ಮುಂಬರುವ ಪುರಿಮ್ ಹಬ್ಬಕ್ಕಾಗಿ ಶುಭಾಶಯಗಳನ್ನು ತಿಳಿಸಿದರು.

7. ಅವರ ಭಾಷಣದ ನಂತರ, ನೆಸ್ಸೆಟ್ ಸ್ಪೀಕರ್ ಗೌರವಾನ್ವಿತ ಅಮೀರ್ ಒಹಾನಾ ಅವರು ಪ್ರಧಾನಮಂತ್ರಿಯವರಿಗೆ "ಮೆಡಲ್ ಆಫ್ ನೆಸ್ಸೆಟ್" ನೀಡಿದರು. ಭಾರತ ಮತ್ತು ಇಸ್ರೇಲ್ ನಡುವಿನ ಶಾಶ್ವತ ಸ್ನೇಹಕ್ಕಾಗಿ ಪ್ರಧಾನಮಂತ್ರಿ ಈ ಗೌರವವನ್ನು ಅರ್ಪಿಸಿದರು. ಪ್ರಧಾನಮಂತ್ರಿಯ ಪೂರ್ಣ ಭಾಷಣವನ್ನು ಇಲ್ಲಿ ನೋಡಬಹುದು [Link]

ಜೆರುಸಲೇಂ

ಫೆಬ್ರುವರಿ 25, 2026